**MVC 733-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 18.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರ ಪರ ಶ್ರೀ G S H, ವಕೀಲರಿಂದಃ**

2. ಮೃತ ಪ್ರೀತಮ ಮಗನಾಗಬೇಕು. ಘಟನೆಯಾದ ದಿನ ನಾನು ಅಲ್ಲಿರಲಿಲ್ಲ. ಅರ್ಜಿಯಲ್ಲಿರುವ ಸಹಿ ನನ್ನದೇ. ಸಾಕ್ಷಿಯೂ ಅರ್ಜಿಯಲ್ಲಿರುವ ಸಹಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.12-ಎ ಎಂದು ಗುರುತಿಸಲಾಯಿತು. ನನ್ನ ಮಗನ ತಪ್ಪಿನಿಂದ ಅಪಘಾತವಾಗಿದೆ ಅಂದರೆ ಸರಿಯಲ್ಲ. 1 ನೇ ಎದುರುದಾರರ ಬಳಿ ನಾನು ಪರಿಹಾರ ತೆಗೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ಪರಿಹಾರ ತೆಗೆದುಕೊಂಡಿದ್ದರೂ ಸಹ ತೆಗೆದುಕೊಂಡಿಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಘಟನೆ ದಿನ 50 ಸಾವಿರ ರೂ. ನಂತರ 3 ಲಕ್ಷ ರೂ. ಗಳನ್ನು 1 ನೇ ಎದುರುದಾರರ ಕಡೆಯಿಂದ ಪರಿಹಾರ ರೂಪದಲ್ಲಿ ಚೆಕ್ ಮೂಲಕ ಪಡೆದಿದ್ದೇನೆ ಅಂದರೆ ಸರಿಯಲ್ಲ. ಈಗ ಸಾಕ್ಷಿಗೆ ಒಡಂಬಡಿಕೆ ಪತ್ರ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿ ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ಆರ್ -1-ಎ ಎಂದು ಗುರುತಿಸಲಾಯಿತು. ಸದರಿ ಒಪ್ಪಂದದ ಪ್ರಕಾರ ಘಟನೆ ದಿನದಂದು 50 ಸಾವಿರ ರೂ. ಹಾಗೂ ದಿಃ 5.10.2024 ರಂದು ಚೆಕ್ ನಂಃ 000023 ರ ಮೂಲಕ 3 ಲಕ್ಷ ರೂ. ಸ್ವೀಕಾರ ಮಾಡಿದ್ದೇನೆಂದು ಇದರಲ್ಲಿ ಬರೆಯಲಾಗಿದೆ ಅಂದರೆ ಸರಿಯಲ್ಲ. ಚೆಕ್ ನ್ನು ನನ್ನ ಖಾತೆಗೆ ಹಾಕಿ ಖಾತೆಗೆ ಹಣ ಜಮಾ ಮಾಡಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಘಟನೆಯಾದನಂತರ 1 ನೇ ಎದುರುದಾರರ ಕಚೆಯಿಂದ ಒಟ್ಟು 3 ಲಕ್ಷ 50 ಸಾವಿರ ರೂ. ಸ್ವೀಕಾರ ಮಾಡಿ ಈಗ ನ್ಯಾಯಾಲಯದಲ್ಲಿ ಹಣ ತೆಗೆದುಕೊಂಡಿಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಎದುರುದಾರರ ವಿರುದ್ಧ ವಿಮೆ ಕಂಪನಿಯಿಂದ ಬರುವ ಹಣ ಹೊರತುಪಡಿಸಿ ಯಾವುದೇ ಕ್ಲೇಮನ್ನು ಮಾಡುವುದಿಲ್ಲವೆಂದು ಒಪ್ಪಂದ ಪತ್ರವನ್ನು ಬರೆದುಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿದರೆ ಕಾನೂನು ಕ್ರಮ ತೆಗೆದುಕೊಳ್ಳುವುದು ಗೊತ್ತು.

**MVC 733-24** **PW : 1**

**ಪಾಟೀ ಸವಾಲುಃ 2 ನೇ ಎದುರುದಾರ ಪರ ಎ ಎಸ್ ಡಿ, ವಕೀಲರಿಂದಃ**

3. ಘಟನೆ ಸ್ಥಳಕ್ಕೆ ಹೋದ ನಂತರ ನನಗೆ ಘಟನೆ ಬಗ್ಗೆ ಗೊತ್ತು. ಘಟನೆ ಸ್ಥಳ ನೋಡಿದ್ದೇನೆ. ಅಲ್ಲಿ ರಿಪೇರಿ ಕೆಲಸ ನಡೆದಿತ್ತು ಅಂದರೆ ಸರಿ. ದೂರನ್ನು ನನ್ನ ಚಿಕ್ಕಪ್ಪನ ಮಗ ಕೊಟ್ಟಿದ್ದಾನೆ. ದೂರನ್ನು ಗೋಣೆಪ್ಪ ಬಸಪ್ಪ ಕಿಳ್ಳಿಕ್ಯಾತರ ಎಂಬುವವರು ನೀಡಿದ್ದಾರೆ. ದೂರುದಾರ ಘಟನೆ ಪ್ರತ್ಯಕ್ಷ ಸಾಕ್ಷಿದಾರ ಅಲ್ಲ ಅಂದರೆ ಸರಿ. ಸ್ಥಳದಲ್ಲಿ ರೋಡ ರಿಪೇರಿ ನಡೆಯುತ್ತಿದ್ದುದರಿಂದ 1 ನೇ ಎದುರುದಾರನು ವಾಹನವನ್ನು ಅತಿ ವೇಗವಾಗಿ ಚಲಾಯಿಸಲು ಬರುತ್ತಿರಲಿಲ್ಲ ಅಂದರೆ ಸರಿಯಲ್ಲ. ನಾನು ಮೊದಲು ರೈತಾಪಿ ಕೆಲಸ ಮಾಡುತ್ತಿದ್ದೆನು, ಈಗ ಏನು ಮಾಡುವುದಿಲ್ಲ. ನನ್ನ ಅರ್ಜಿಯಲ್ಲಿ ಹಾಗೂ ದಾಖಲೆ ಹಾಜರಪಡಿಸುವಾಗ ಉದ್ಯೋಗ ಃ House wife ಎಂದು ಬರೆಸಿದ್ದೇನೆ ಅಂದರೆ ಗೊತ್ತಿಲ್ಲ. ಮುಖ್ಯ ವಿಚಾರಣೆಗೆ ಮಾಹಿತಿ ನಾನೇ ನೀಡಿದ್ದೇನೆ. ಮೃತನಿಗೆ ವಾರಸುದಾರರೆಂದು ತೋರಿಸಲು ವಾರಸಾ ಪ್ರಮಾಣ ಪತ್ರ ಹಾಜರಪಡಿಸಿಲ್ಲ, ಹಾಜರಪಡಿಸುತ್ತೇನೆ. ಮೃತ ಪ್ರೀತಮ ಕೆಲಸ ಕ್ಕೆ ಹೋಗಿ 1 ದಿನಕ್ಕೆ 600/- ಹಾಗೂ 150/- ಭತ್ಯೆ ಗಳಿಸುವ ಬಗ್ಗೆ ದಾಖ್ಲೆ ಹಾಜರಪಡಿಸಿಲ್ಲ. ಪ್ರೀತಮ ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ ಅಂದರೆ ಸರಿಯಲ್ಲ. ರೋಡ ರಿಪೇರಿ ನಡೆಯುತ್ತಿರುವಾಗ ಅಪಘಾತ ವಾಗಿದ್ದರಿಂದ ರಸ್ತೆ ಪ್ರಾಧಿಕಾರವನ್ನು ಪಕ್ಷಗಾರರನ್ನಾಗಿ ಮಾಡದೆ ಅರ್ಜಿ ಊರ್ಜಿತ ಅಲ್ಲ ಅಂದರೆ ಸರಿಯಲ್ಲ. ತಿಳಿದುಕೊಂಡು ದಾಖಲೆ ಹಾಜರಪಡಿಸಿದ್ದೇನೆ. ಅಂತಿಮ ವರದಿಯಲ್ಲಿ ಚಾಲಕ ಚಾಲನಾ ಪತ್ರ ಹೊಂದದೆ ವಾಹನ ಚಲಾಯಿಸಿದ್ದಾನೆಂದು ಹೇಳಲಾಗಿದೆ ಅಂದರೆ ಸರಿಯಲ್ಲ. ನಾನು ಹಾಜರಪಡಿಸಿದ ಅಂತಿಮ ವರದಿಯಲ್ಲಿ ಆ ತರಹ ಹೇಳಲಾಗಿದೆ ಅಂದರೆ ಸರಿಯಲ್ಲ. ಚಾಲನಾ ಪತ್ರ ಹೊಂದದೆ ವಾಹನ ಚಲಾಯಿಸಿದ್ದರಿಂದ ವಿಮೆ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಅಂದರೆ ಸರಿಯಲ್ಲ. ನಾನು ಹಾಗೂ 2 ನೇ ಅರ್ಜಿದಾರರು ಮಗನ ಆದಾಯದ ಮೇಲೆ ಅವಲಂಬನೆಯಾಗಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.